**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: 3

(ಇಂದು ದಿನಾಂಕಃ **07-01-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ. P.S.N. ವಕೀಲರಿಂದ**

ನಿ.ಪಿ.2 ಆರೋಪಿತನ ಖಾತೆಗೆ ಸಂಭಂಧಿಸಿರುತ್ತದೆ. ಈ ವಿಷಯವನ್ನು ನಾನು ನಮ್ಮ ಗೋಕರ್ಣ ಶಾಖೆಯ ಕಾರ್ಯ ನಿರ್ವಹಣಾಧಿಕಾರಿಯಾದ ರಮ್ಯಾ ಗಿರಿಯಣ್ಣರವರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ2 ಆರೋಪಿತಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ2 ರಿಂದ 4 ರಲ್ಲಿ ಇರುವಂತಹ ಚೆಕ್ಕಿನ ಸಹಿಯ ಕೆಳಗಡೆ ಇರುವ ಬರವಣಿಗೆಯು ನಿಪಿ 2 ರ ಮೇಲೆ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ 2 ಸಾಲದ ಭದ್ರತೆಗಾಗಿ ನಮ್ಮ ಫಿರ್ಯಾದಿ ಸಂಸ್ಥೆಯವರು ಬೇರೆಯವರಿಂದ ಪಡೆದುಕೊಂಡ ಫಿರ್ಯಾದಿ ಸಂಸ್ಥೆಯಲ್ಲಿ ಇರುವ ಚೆಕ್ ಎಂದರೆ ಸರಿಯಲ್ಲ. ನಮ್ಮ ಶಾಖೆಯಲ್ಲಿ ಇರುವ ಚೆಕ್ ಮೇಲೆ ನಾವೇ ಬರವಣಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 2 ರಮೇಲಿನ ಬರವಣಿಗೆಯು ನನ್ನ ಮುಂದೆ ಆಗಿರುವುದಿಲ್ಲ ಎಂದರೆ ಸರಿ. ನಿಪಿ 2 ರ ಮೇಲಿನ ಬರವಣಿಗೆಯು ನನ್ನ ಪ್ರಕಾರ ಯಾರ ಮುಂದೆ ಆಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಈ ಪ್ರಕರಣದಲ್ಲಿ ನಾವು ಆರೋಪಿತನಿಗೆ ನೋಟೀಸನ್ನು ನೀಡಿರುತ್ತೇವೆ. ಈ ಪ್ರಕರಣದ ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ನಾನು ಭೇಟ್ಟಿ ಆಗಿರುವುದಿಲ್ಲ. ಜಾಮೀನುಗಾರರಿಗೆ ಹಾಗೂ ಸಾಲಗಾರರಿಗೆ ಯಾವುದೇ ನೋಟೀಸನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಾವು ಜಾಮೀನುದಾರರಿಗೆ ಯಾವ ದಿನಾಂಕದಂದು ನೋಟೀಸನ್ನು ನೀಡಿರುತ್ತೇವೆ ಎಂದು ನನಗೆ ನೆನಪಿಲ್ಲ. ಆರೋಪಿತನಿಗೆ ನಿಪಿ 4 ನ್ನು ದಿನಾಂಕಃ 06/12/2023 ರಂದು ನೀಡಿರುತ್ತೇವೆ. ನಿಪಿ 4 ಆರೋಪಿಗೆ

ತಲುಪಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲಿಸಿದ ನಂತರದಲ್ಲಿ ಆರೋಪಿತನಿಗೆ ನಾವು ಸುಳ್ಳು ಪ್ರಕರಣವನ್ನು ದಾಖಲಿಸಿದ ಕುರಿತಾಗಿ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ಈ ವಿಷಯ ಆರೋಪಿತನಿಗೆ ತಿಳಿದು ಬಂದ ನಂತರದಲ್ಲಿ ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದು ಫಿರ್ಯಾದಿ ಸಂಸ್ಥೆಯವರ ವಿರುದ್ಧ ಹಾಗೂ ಪಿಡಬ್ಲೂ1 ರವರ ವಿರುದ್ಧ ಪ್ರಕರಣವನ್ನು ದಾಖಲಿಸುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಫಿರ್ಯಾದಿ ಸಂಸ್ಥೆಯವರು ಹಾಗೂ ಪಿಡಬ್ಲೂ1 ರವರು ಆರೋಪಿತನ ಬಳಿ ಯಾವುದೇ ಪ್ರಕರಣವನ್ನು ದಾಖಲಿಸಬೇಡಿ ಎಂದು ಪರಿಪರಿಯಾಗಿ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಫಿರ್ಯಾದಿ ಸಂಸ್ಥೆಯವರು ಪ್ರಕರಣವನ್ನು ಹಿಂಪಡದುಕೊಳ್ಳದೇ ಇರುವುದರಿಂದ ಪಿಡಬ್ಲೂ 1 ಹಾಗೂ 2 ರವರು ನಮ್ಮ ಫಿರ್ಯಾದಿ ಸಂಸ್ಥೆಗೆ ರಾಜೀನಾಮೆ ಕೊಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪಿಡಬ್ಲೂ 1 ಹಾಗೂ 2 ರವರು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಪ್ರಸ್ತುತ ಕರ್ತವ್ಯದಲ್ಲಿ ಇಲ್ಲ ಎಂದರೆ ಸರಿ. ಈ ಪ್ರಕರಣವನ್ನು ಹೊರತುಪಡಿಸಿ ಇದೇ ರೀತಿಯ ಬೇರೆ ಪ್ರಕರಣಗಳನ್ನು ಬೇರೊಬ್ಬರ ಚೆಕ್ಕಗಳನ್ನು ಇಟ್ಟುಕೊಂಡು ಕಾನೂನು ಬಾಹಿರವಾಗಿ ಹಣ ವಸೂಲು ಮಾಡಲು ಪ್ರಕರಣಗಳನ್ನು ದಾಖಲು ಮಾಡಿರುವುದರಿಂದ ಅವರು ಅಂತಹ ಪ್ರಕರಣಗಳನ್ನು ಪ್ರತಿನಿಧಿಸಲು ಹಿಂಜರಿದು ನಮ್ಮ ಫಿರ್ಯಾದಿ ಸಂಸ್ಥೆಯನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತನದ್ದಲ್ಲದ ಚೆಕ್ಕನ್ನು ಈ ಪ್ರಕರಣದಲ್ಲಿ ಆರೋಪಿತನದ್ದು ಎಂದು ಬಿಂಬಿಸಿ ಈ ಪ್ರಕರಣವನ್ನು ಮುನ್ನಡೆಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಫಿರ್ಯಾದಿ ಸಂಸ್ಥೆಗೆ ಆರೋಪಿತನು ಕಾನೂನು ಕ್ರಮವನ್ನು ತೆಗೆದುಕೊಳ್ಳುವ ಹಕ್ಕನ್ನು ಉರ್ಜಿತದಲ್ಲಿ ಇಟ್ಟುಕೊಂಡಿದ್ದಾನೆ

ಎಂದರೆ ಸರಿಯಲ್ಲ. ನಮ್ಮ ಫಿರ್ಯಾದಿ ಸಂಸ್ಥೆಯು ಆರೋಪಿತನಿಗೆ ಪರಿಹಾರದ ರೂಪದಲ್ಲಿ ಹಣವನ್ನು ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

ನಿಪಿ 3 ರಲ್ಲಿ ಇರುವಂತಹ ಹಿಂಬರಹ ಬಂದ ನಂತರದಲ್ಲಿ ನಮಗೆ ನಿಪಿ 2 ರ ಮಾಲೀಕರಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ರ ಮಾಲೀಕರಿಗೆ ನಿಪಿ 3 ರ ವಿಷಯವನ್ನು ತಿಳಿಸಿದ್ದರೆ ಅವರೂ ಸಹ ನಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಈ ಮೊದಲು ಮಾಡಿದ ಸಾಲದ ದಾಖಲೆಗಳ ಸಹಿಯನ್ನು ನೋಡಿಕೊಂಡು ನಿಪಿ 2 ರ ಮೇಲೆ ನಕಲು ಮಾಡಿ ಅದನ್ನು ನಾವು ನಮ್ಮ ದುರುದ್ದೇಶವನ್ನು ಇಡೇರಿಸಿಕೊಳ್ಳಲು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ